O.S 438 /2022
Pw1

ದಿನಾಂಕ 22.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಆರ್ .ಎಂ . ವಕೀಲರಿಂದಃ</u>**

ನಾನು 8 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತೇನೆ. ಪ್ರಸ್ತುತ ದಾವೆಯನ್ನು ಯಾವ ಕಾರಣಕ್ಕೆ ಹೂಡಿರುತ್ತೀರಿ ಎಂದರೆ ಸಾಕ್ಷಿಯು ಪ್ರತಿವಾದಿ ರಾಜಣ್ಣ ರವರು ತನ್ನ ಜಮೀನಿಗೆ ಬಂದು ತೊಂದರೆ ನೀಡಿದ್ದರಿಂದ ಹೂಡಿರುವುದಾಗಿ ನುಡಿಯುತ್ತಾರೆ. ನನ್ನ ತಂದೆ-ತಾಯಿಯ ಹೆಸರು ಚೆನ್ನಕೃಷ್ಣ ಮತ್ತು ಸೌಭಾಗ್ಯ ಆಗಿರುತ್ತದೆ. ನಿಮ್ಮ ತಂದೆ ಎಲ್ಲಿ ವಾಸ ಮಾಡುತ್ತಾರೆ ಎಂದರೆ ಸಾಕ್ಷಿಯು ತನ್ನನ್ನು ತನ್ನ ತಾಯಿ ಮೃತ ಪಟ್ಟ ನಂತರ ಅಜ್ಜಿ ತಾತ ನೋಡಿಕೊಂಡಿದ್ದು ತಾನು ತನ್ನ ತಂದೆಯನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಮೃತ ಪಟ್ಟಾಗ ನಾನು 2 ವರ್ಷದ ಮಗು ಇದ್ದಿರಬಹುದು. ಆದರೆ ವರ್ಷ ನನಗೆ ತಿಳದಿರುವುದಿಲ್ಲ. ನಾನು 1988 ರಲ್ಲಿ ಜನಿಸಿರುತ್ತೇನೆ. ನಿಪಿ 5 ರ ಮೂಲ ಪ್ರತಿ ಎಲ್ಲಿರುತ್ತದೆ ಎಂದರೆ ಸಾಕ್ಷಿಯು ಅದನ್ನು ರಾಜಣ್ಣ ರವರು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ರಾಜಣ್ಣ ರವರು ನಿಪಿ 5 ರ ಅಸಲು ಪ್ರತಿಯನ್ನು ತೆಗೆದುಕೊಂಡು ಹೋದಾಗ ಅವರ ವಿರುದ್ದ ದೂರು ನೀಡಿರುವುದಿಲ್ಲ. ನೀವು ಯಾವ ಕಾರಣಕ್ಕೆ ದೂರು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ತನ್ನ ಅಜ್ಜಿ ಪ್ರತಿವಾದಿ ಸದರಿ ದಾಖಲೆಯನ್ನು ಹಿಂತಿರುಗಿಸಬಹುದು ದೂರು ನೀಡುವುದು ಬೇಡ ಎಂದಿದ್ದರಿಂದ ದೂರು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ಅಜ್ಜಿ ಮೊದಲು ಮೃತ ಪಟ್ಟಿದು ನಂತರ ತಾತ ಮೃತಪಟ್ಟಿರುತ್ತಾರೆ. ನನ್ನ ಅಜ್ಜಿ ಸುಮಾರು 8 ವರ್ಷಗಳ ಹಿಂದೆ ಮೃತಪಟ್ಟಿದ್ದು ಅವರು ಮೃತ ಪಟ್ಟ ಸುಮಾರು 6 ತಿಂಗಳ ನಂತರ ತಾತ ಮೃತ ಪಟ್ಟಿರುತ್ತಾರೆ ಆದರೆ ನನಗೆ ನಿರ್ದಿಷ್ಟ ದಿನಾಂಕ ನೆನಪಿರುವುದಿಲ್ಲ ಮತ್ತು ನಾನು ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಾತನ ಹೆಸರು

ಪಟೇಲ್ ತಿರುಮಲೆಗೌಡ ಆಗಿರುತ್ತದೆ. ಅವರಿಗೆ ಒಬ್ಬರೇ ಹೆಂಡತಿ ಇದ್ದರು. ಅವರ ಹೆಸರು ಸಿದ್ದಬೈರಮ್ಮ ಆಗಿರುತ್ತದೆ. ಸಿದ್ದಬೈರಮ್ಮ ಮತ್ತು ಪಟೇಲ್ ತಿರುಮಲೆಗೌಡ ರವರಿಗೆ 5 ಜನ ಮಕ್ಕಳಿದ್ದು ಅವರುಗಳ ಹೆಸರು ಲಕ್ಷ್ಮಮ್ಮ, ಸಿದ್ದಮ್ಮ, ಸೌಭಾಗ್ಯ, ಪ್ರಕಾಶ ಮತ್ತು ಮಂಜುಳಾ ಆಗಿರುತ್ತಾರೆ.

ಪ್ರಶ್ನೇಃ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ 1 ನೇ ಪ್ರತಿವಾದಿ ರಾಜಣ್ಣ ರವರು ನಿಮಗೆ ಏನಾಗಬೇಕು?

ಉತ್ತರಃ ಮಾವನಾಗಬೇಕು.

ಪ್ರಸ್ತುತ ದಾವೆಯ 2 ನೇ ಪ್ರತಿವಾದಿ ಲಕ್ಷ್ಮಮ್ಮ ರವರು ನನ್ನ ತಾತ ಪಟೇಲ್ ತಿರುಮಲೆಗೌಡ ರವರ 2 ನೇ ಹೆಂಡತಿ ಎಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿ ಪಟೇಲ್ ತಿರುಮಲೆಗೌಡ ರವರ ಮಗ ಎಂದರೆ ಸರಿ. ನಾನು ನಿಪಿ 1 ರಲ್ಲಿ ಹಾಜರುಪಡಿಸಿರುವ ವಂಶ ವೃಕ್ಷ ದಾನ ಪತ್ರ ಬರೆಸಿಕೊಳ್ಳಲು ಸೃಷ್ಟಿ ಮಾಡಿದ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ನಿಪಿ 1 ರಲ್ಲಿ ಪಟೇಲ್ ತಿರುಮಲೆಗೌಡ ರವರಿಗೆ 2 ನೇ ಹೆಂಡತಿ ಮತ್ತು ಮಕ್ಕಳು ಇರುವ ವಿಚಾರವನ್ನು ಮರೇಮಾಚಿ ನನಗೆ ಬೇಕಾದಂತೆ ದಾಖಲೆ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ಅನ್ನು ನನ್ನ ತಾತ ಬರೆಯಿಸಿರುತ್ತಾರೆ. ಸಾಕ್ಷಿಗೆ ಈಗ ನಿಪಿ 3 ಅನ್ನು ತೋರಿಸಲಾಗಿ ನಿಪಿ 3 ರಲ್ಲಿ ಪಟೇಲ್ ತಿರುಮಲೆಗೌಡ ರವರ ಪತ್ನಿಯ ಹೆಸರು ಏನೆಂದು ನಮೂದಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಲಕ್ಷ್ಮಮ್ಮ ಎಂದು ನಮೂದಾಗಿರುವುದಾಗಿ ಹೇಳುತ್ತಾರೆ. ನಿಪಿ 3 ಅನ್ನು ನಾನೇ ಪಡೆದುಕೊಂಡಿರುತ್ತೇನೆ.

**ಮುಂದುವರೆದ ವಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದುಡಲಾಯಿತು.**

(ಮೇಲ್ಕಂಡ ಸಾಕ್ಷವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ